**ಸಿ.ಸಿ.ನಂ.:**2110/2023

ಪಿ.ಡಬ್ಲ್ಯೂ:

(ಇಂದು ದಿನಾಂಕಃ 24-07-**2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

1. ಯಾವುದೇ ಸಾಲದ ಅರ್ಜಿ ಬಂದಾರ ಸಾಲಗಾರರ ಹಾಗೂ ಜಾಮೀನಯಿದಾಾರ ಕೆವೈಸಿ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಸದರಿ ದಾಖಲಾತಿಗಳ ಆಧಾರದ ಮೇಲೆ ಸಾಲಗಾರರ ಹಾಗೂ ಜಾವಿಕೀನುದಾರರ ವಿಳಾಸವು ಸರಿಯಾದ ನಮೂದು ಆಗಿದೆಯೋ ಇಲ್ಲವೋ ಎಂಬುವುದನ್ನು ಖಚಿತಪಡಿಸಿಕೊಳ್ಳುತ್ತೇವೆ. ಆರೋಪಿನ ಕೆವೆನ್ನೈಸಿ ದಾಖಲಾತಿಗಳಲ್ಲಿ ಆತನ ವಿಳಾಸ ಮೂರುರು ಎಂದು ಇತ್ತು. ಆರೊಪಿತನು ಎ.ಸಿ ಕಚೇರಿಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತಿದ್ದಾನೆ, ಆರೊಪಿತನ ಕಚೇರಿಯ ವಿಳಾಸವು ಕೂಡ ನನಗೆ ತಿಳಿದಿತ್ತು. ಆರೋಪಿತನ ಖಾಯಂ ವಿಳಾಸ ಮೂರು ಕಲ್ಲಬ್ಬೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆತನು ಹೆರವಟ್ಟಾದಲ್ಲಿ ಎಲ್ಲಿಯೋ ಬಾಡಿಗೆ ಮನೆಯಲ್ಲಿ ಇದ್ದನು ಎಂದು ನುಡಿಯುತ್ತಾನೆ. ಹೆರವಟ್ಟಾದಲ್ಲಿ ಯಾರ ಬಾಡಿಗೆಯಲ್ಲಿ ಇದ್ದನೋ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿತನು ಹೆರವಟ್ಟಾದಲ್ಲ ಯಾರ ಮನೆಯಲ್ಲಿ ಇದ್ದಾನೆ ಎಂಬ ಬಗ್ಗೆ ಕಳಚುಹಿಸಿ ಅಂಚೆಗಳಿಗೆ C/o ಎಂದು ನಮೂದು ಮಾಡಬೇಕು ಎಂದರೆ ಸರಿ. ಹೆರವಟ್ಟಾದಲ್ಲಿ ಕಮಲೇಶ ಎಂಬ ಹೆಸರಿನ ಎಷ್ಟು ವ್ಯಕ್ತಿಗಳು ಇದ್ದಾರೆ ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಆರೋಪಿತನಮೂಲ ವಿಳಾಸ ಹಾಗೂ ಆರೋಪಿತ ಕಚೆರಿಯ ವಿಳಾಸಕ್ಕೆ ಯಾವುದೇ ನೊಟಿಸನ್ನು ಕಳುಹಿಸಲಿಲ್ಲ ಎಂದರೆ ಸಾಕ್ಷಿಯು ಮೂಲ ವಿಳಾಸಕ್ಕೆ ಕಳುಹಿಸಿದ್ದು ಕಚೇರಿಯ

ವಿಳಾಸಕ್ಕೆ ಕಳುಹಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಈ ಪ್ರಕರಣದಲ್ಲಿ ಲೀಗಲ್ ನೊಟಿಸನ್ನು ಆರೋಪಿತನ ಮೂಲ ವಿಳಾಸಕ್ಕೆ ಕಳುಹಿಸಿರುತ್ತೇನೆ. ನಾವು ಈ ಕುರಿತಾಗಿ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇವೆ.

2 ಸಾಕ್ಷಿಗೆ ತಾವು ನ್ಯಾಯಾಲಯದಲ್ಲಿ ನಿಶಾನಿಕರಿಸಿಕೊಂಡ ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಗಳಲ್ಲಿ ಮೂಲ ವಿಳಾಸಕ್ಕೆ ಕಳುಹಿಸಿದ ನೋಟಿಸಿನ ಪ್ರತಿ ಇರುವುದಿಲ್ಲ. ಆರೋಪಿನ ಮೂಲ ವಿಳಾಸಕ್ಕೆ ದಿನಾಂಕದಂದು ನೊಟಿಸನ್ನು ಕಳುಹಿಸಿದ್ದೇವೆ ಎಂಬ ಬಗ್ಗೆ ನನಗೆ ನೆನಪಿಗೆ ಬರುತ್ತಿಲ್ಲ. ಸಾಮಾನ್ಯವಾಗಿ ಯಾವುದೇ ವಿಳಾಸಕ್ಕೆ ಅಂಚೆಯನ್ನು ಕಳುಹಿಸಿದ್ದೇವೆ ಎಂಬುವುದವರ ಕುರಿತಾಗಿ ಸದರಿ ಅಂಚೆಯನ್ನು ಕಳುಹಿಸಿದ ಕುರಿತಾಗಿ ರಶೀದಿ ಹಾಗೂ ಸದರಿ ನೊಟಸು ತಲುಪಿದೆಯೋ ಎಂಬ ಬಗ್ಗೆ ಅಂಚೇ ಸ್ವೀಕೃತಿ ಇರುತ್ತದೆ ಎಂದರೆ ಸರಿ,. ನಾನು ಆರೋಪಿತನ ಮೂಲ ವಿಳಾಸಕ್ಕೆ ನೊಟಿಸನ್ನು ಕಳುಹಿಸಿದ್ದೇವೆ ಎಂಬುವುದನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ನೊಟಿಸು ವಾಪಸ್ಸು ಬಂದಿರುತ್ತದೆ. ಸದರಿ ನೊಟಸಿ ಯಾಕೆ ವಾಪಸ್ಸು ಬಂದಿರುತ್ತದೆ ಎಂಬ ಬಗ್ಗೆ ಹೇಳಲು ಸಾಧ್ಯವಿದೆಯಾ ಎಂದರೆ ಸಾಕ್ಷಿಯು ಸದರಿ ವಿಳಾಸದಲ್ಲಿ ಆರೊಪಿತನು ನೊಟಿಅಸು ಹೋದದಂತಹ ಸಂದರ್ಭದಲ್ಲಿ ಅಲ್ಲಿ ಇರದೇ ಇರಬಹುದು ಎಂದು ನುಡಿಯುತ್ತಾರೆ. ನಾವು ನೊಟಿಸು ಕಳುಹಿಸಿದ್ದೇ ಆದಲ್ಲಿ ಅದಕ್ಕೆ ಸಂಬಂದಿ,ಸಿದಂತಹ ದಾಖಲಾತಿಳು ನಮ್ಮ ಬಳಿ ಇರುತ್ತದೆ. ಆರೊಪಿತನು ಖಾಯಂನ ವಿಳಾಸಕ್ಕೆ ನೋಟಿಸನ್ನು ತಲುಸಿದ್ದೇವೆ ಎಂದು ಪುರಾವೆ ಮಾಡಲು ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿತನ ಮೂಲ ವಿಳಾಸಕ್ಕೆ ನೊಟಿಸನ್ನು ಕಳುಹಿಸದೇ ಇದ್ದರೂ ಕೂಡ ಹಾಗೂ ಈ ಕುರಿತಾಗಿ ಯಾವುದೇ

**ಸಿ.ಸಿ.ನಂ.:**2110/2023

ಪಿ.ಡಬ್ಲ್ಯೂ:

ದಾಖಲಾತಿಗಳು ಇಲ್ಲದೇ ಇದ್ದರೂ ಸಹ ನಾನು ಸಂದರ್ಭಕ್ಕೆ ಸರಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾವು ನಮ್ಮ ಖಾತೆಯ ಉತಾರನ್ನು ಸಾಫ್ಟವೇರ ಮುಖಾಂತರ ನಿರ್ವಹಣೆ ಮಾಡುತ್ತಿದ್ದೇವೆ. ಸಾಫ್ಟವೇರ ಮುಖಾಂತರ ಖಾತೆಯ ಉತಾರನ್ನು ನಿರ್ವಹಣೆ ಮಡುವ ಉದ್ದೇಶವೆಂದರೆ ಸದರಿ ಖಾತೆ ಉತಾರ ಸ್ಪಷ್ಟವಾಗಿ ಪಾರದರ್ಶಕವಾಗಿ ಇರಬೇಕು ಎಂಬ ಕಾರಣದಿಂದಾಗಿ ಈ ರೀತಿಯಾಗಿ ಸಾಫ್ಟವೇರ ಮುಖಾಂತರ ನಿರ್ವಹಿಸುತ್ತೇವೆ ಎಂದರೆ ಸರಿ. ನಾವು ಸಾಫ್ಟವೇರ ಮುಖಾಂತರ ಖಾತೆ ಉತಾರ ನಿರ್ವಹಿಸುವುದರಿಂದ ಅದರಲ್ಲಿ ಒಂದು ಬಾರಿ ನಮೂದಾದರೆ ಸದರಿ ನಮೂದುದಾದು ಬದಲಾಗಲು ಸಾಧ್ಯವಿಲ್ಲ ಎಂದರೆ ಸರಿ. ಸ ದರಿ ಸಾಲ ಖಾತೆಯ ಖಾತಾರನಲ್ಲಿ ಸಾಲಗಾರರು ಯಾರು ಹಾಗೂ ಜಾಮೀನುದಾರರು ಯಾರು ಎಂಬ ಬಗ್ಗೆ ಸರಿಯಾಗಿ ನಮೂದು ಇರುತ್ತೆ. ಅದೇ ರೀತಿಯಾಗಿ ಅವರ ಸದಸ್ಯತ್ವ ಸಂಖ್ಯೆ ಬರುತ್ತದೆ ಎಂದರೆ ಸರಿ. ಒಂದಾನುವೇಳೆ ಸಾಲಗಾರರು ಹಾಗೂ ಜಾಮೀನುದಾರರು ಇಲ್ಲದೇ ಇದ್ದ ಸಂದರ್ಭದಲ್ಲಿ ಸದರಿ ಖಾತೆಯ ಉತಾರನಲ್ಲಿ ಅವರ ಹೆಸರು ಬರುವುದಿಲ್ಲ ಎಂದರೆ ಸರಿ.

4. ನಿಪಿ.12 ನಮ್ಮ ಪ್ರಕಾರ ಈ ಪ್ರಕರಣದ ಸಾಲದ ಖಾತೆ ಉತಾರ ಎಂದರೆ ಸರಿ. ನಿಪಿ.12 ಸಾಫ್ಟವೇರ ಮುಖಾಂತರ ನಿರ್ವಹಣೆ ಮಾಡಿದ ದಾಖಲಾತಿಯಾಗಿರುತ್ತದೆ. ನಿಪಿ.12ರಲ್ಲಿ ಆರೋಪಿತನು ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದ ಜಾಮಿನುದಾರನಾಗಿರುತ್ತಾನೆ ಎಂಬುವುದನ್ನು ತೋರಿಸಲು ಆತನ ಸದಸ್ಯತ್ವ ಸಂಖ್ಯೆ ಹಾಗೂ ಹೆಸರು ನಮೂದು ಇಲ್ಲ ಎಂದರೆ ಸರಿ.

**ಸಿ.ಸಿ.ನಂ.:**2110/2023

ಪಿ.ಡಬ್ಲ್ಯೂ:

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ